ಹೊಳೆನರಸೀಪುರದ ಅಪರ ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ.

ಸಿ.ಸಿ. ನಂಃ **642/2018**

| | | | |
|---|---|---|---|
| ಸಾಕ್ಷಿಯ ಹೆಸರು | ಃ ಮಂಜುನಾಥ ಎಮ್ ಕುಂಚೂರು | ಸಿ.ಡಬ್ಲ್ಯೂ | ಃ 04 |
| ತಂದೆ ಹೆಸರು | ಃ ಮಲ್ಲಪ್ಪ | ಪಿ.ಡಬ್ಲ್ಯೂ | ಃ 04 |
| ವಯಸ್ಸು | ಃ 36 ವರ್ಷ | ಪ್ರಮಾಣೀಕರಿಸಿದ ದಿಃ | 19.06.2026 |
| ವೃತ್ತಿ | ಃ ಕಂದಾಯ ಅಧಿಕಾರಿ | | |
| ವಾಸ | ಃ ಹಾಸನ | | |

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಎ.ಪಿ.ಪಿ.ಯವರಿಂದಃ

ನಾನು 2014 ರಿಂದ 2018 ರವರೆಗೆ ಗ್ರಾಮ ಲೆಕ್ಕಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 01.04.2016 ರಂದು ಚಾ ಸಾ 5 ರವರೊಂದಿಗೆ ಸಿಗರನಹಳ್ಳಿ ಬಸವೇಶ್ವರ ದೇವಸ್ಥಾನ ಬಳಿ ಹೋಗಿದ್ದೇವು. ಮದ್ಯಾಹ್ನ 1.30 ರ ಸುಮಾರಿಗೆ ಬಸವೇಶ್ವರ ದೇವಸ್ಥಾನದ ಮುಂಭಾಗಕ್ಕೆ ಬಂದೆವು. ಆ ದಿನಕ್ಕೂ 6 ತಿಂಗಳ ಮೊದಲು ಒಕ್ಕಲಿಗರು ಮತ್ತು ಪರಿಶಿಷ್ಟ ಜಾತಿ ಜನಾಂಗದವರ ಮದ್ಯೆ ದೇವಸ್ಥಾನದ ವಿಚಾರವಾಗಿ ಗಲಾಟೆ ಯಾಗಿತ್ತು. ನಂತರ ದೇವಸ್ಥಾನದ ಬಾಗಿಲನ್ನು ಮುಚ್ಚಲಾಗಿತ್ತು. ನಂತರ ದಿನಾಂಕ 02.04.2016 ರಂದು ಜಾತ್ರೆ ಇರುವುದರಿಂದ ಪಕ್ಕದ ಊರಾದ ಹರಿಹರಪುರದಲ್ಲಿ ಸಿಗರನಹಳ್ಳಿ ಮುಖಾಂತರ ಬಂಡಿ ಹೋಗಲು ಅವಕಾಶ ಮಾಡಿಕೊಡುವಂತೆ, ಮುಚ್ಚಿದ ದೇವಸ್ಥಾನದ ಬಾಗಿಲನ್ನು ತೆಗೆಯಲು ಚಾ ಸಾ 3ರವರಿಗೆ ಪರಿಶಿಷ್ಟ ಜಾತಿಯವರು ಕೇಳಿಕೊಂಡಿದ್ದರು. ಮದ್ಯಾಹ್ನ 1.30 ಸುಮಾರಿಗೆ ಮೇಲ್ವರ್ಗ ಮತ್ತು ಪರಿಶಿಷ್ಟ ಜಾತಿಯವರು ಸಿಗರನಹಳ್ಳಿ ಬಸವೇಶ್ವರ ದೇವಸ್ಥಾನದಲ್ಲಿರುವ ಮತ್ತು ಶಾಲೆಯ ಬಳಿ ಸೇರಿದ್ದರು. ಚಾ ಸಾ 1 ರವರು ದೇವಸ್ಥಾನವನ್ನು ಜಾತ್ರ ಕಾರಣ ತೆರೆಯವುದಾಗಿ ಗ್ರಾಮಸ್ಥರಿಗೆ ತಿಳುವಳಿಕೆ ಹೇಳುತ್ತಿದ್ದರು.

2. ಅದರಲ್ಲಿ ಒಂದನೇ ಆರೋಪಿ, ಎರಡನೇ ಆರೋಪಿ, ನಾಲ್ಕನೇ ಆರೋಪಿ, ಆರನೇ ಆರೋಪಿ, ಏಳು , ಎಂಟು ಮತ್ತು ಒಂಭತ್ತನೇ ಆರೋಪಿಗಳು ಚಾ ಸಾ 1 ರವರಿಗೆ ನೀವು ಪರಿಶಿಷ್ಟ ಜಾತಿಯವರ ಕಡೆ ಬಂದಿದ್ದೀರಿ ಎಂದು ಗಲಾಟೆ ಮಾಡಿದರು. ಮತ್ತು ಚಾ ಸಾ 1 ರವರಿಗೆ ಅವ್ಯಾಚ್ಚ ಶಬ್ದಗಳಿಂದ ಬೈದರು. ನಂತರ ಅಷ್ಟರಲ್ಲಿ ಪೊಲೀಸರು ಲಘು ಪ್ರಹಾರ ಮಾಡಿದರು. ಚಾ ಸಾ 2 ರವರು ವಿಡೀಯೋ ಮಾಡುತ್ತಿದ್ದ ಟ್ಯಾಬ್ ಅನ್ನು ಕಿತ್ತು ಕೊಂಡು ಹೊಡೆದು ಹಾಕಿದರು. ನಂತರ ಪೊಲೀಸರು ನಮ್ಮನ್ನು ಶಾಲೆಯ ಒಳಗಡೆ ಹೋಗುವಂತೆ ಹೇಳಿದರು. ಗಲಾಟೆಯಲ್ಲಿ ಚಾ ಸಾ 2ರವರಿಗೆ ಏಟಾಗಿರುತ್ತದೆ. ನಾವು ಶಾಲೆಯ ಒಳಗಡೆ ಹೋದಾಗ ಹೊರಗಡೆಯಿಂದ ಕಲ್ಲು ತೂರಾಟ ಆಯಿತು. ಸಾಕ್ಷಿ ಆರೋಪಿಗಳನ್ನು ಮತ್ತೇ ನೋಡಿದರೆ ಗುರುತಿಸುವುದಾಗಿ ಹೇಳಿದ್ದು ಆರೋಪಿ ಗಳ ಗುರುತಿಕೆ ವಕೀಲರಿಂದ ಯಾವುದೇ ತಕರಾರು ವ್ಯಕ್ತವಾಗಿರುವುದಿಲ್ಲ.

(ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಭಾಗಶಃ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ. ಕಲಂ 161 ಹೇಳಿಕೆಯನ್ನು ಪರಿಶಿಲೀಸಿ ಪಾಟಿ ಸವಾಲಿಗೆ ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ - ಮಾನ್ಯ ಎ.ಪಿ.ಪಿ. ರವರಿಂದಃ

ಆರೋಪಿಗಳೆಲ್ಲರೂ ಅಕ್ರಮ ಕೂಟ ಕಟ್ಟಿಕೊಂಡು ಮಾರಕಾಸ್ತ್ರಗಳನ್ನು ಹಿಡಿದುಕೊಂಡು ನಮ್ಮನ್ನು ಹೊಡೆಯಲು ಬಂದಿದ್ದರು ಎಂದರೆ ಸರಿ. ನಂತರ ಚಾ ಸಾ 1ರವರಿಗೆ ದೇವಸ್ಥಾನವನ್ನು ತೆರೆಸಿದ್ದರೆ ನಿಮ್ಮನ್ನು ಕೊಲೆ ಮಾಡುತ್ತೇವೆ ಎಂದು ಬೆದರಿಕೆ ಹಾಕಿದ್ದರು ಎಂದರೆ ಸರಿ. ಟ್ಯಾಬ್ ಅನ್ನು ಕಿತ್ತು ಕೊಂಡು ಕೆಳಗೆ ಹಾಕಿ ಹೊಡೆದು ಹಾಕಿದರು ಎಂದರೆ ಸರಿ . ನಾವು ಸರ್ಕಾರಿ ಕರ್ತವ್ಯದಲ್ಲಿದ್ದಾಗ ಅದಕ್ಕೆ ಆರೋಪಿಗಳು ಅಡ್ಡಿ ಪಡಿಸಿದರು ಎಂದರೆ ಸರಿ. ಟ್ಯಾಬ್ ನ ಅಂದಾಜು ಬೆಲೆ 25000/- ಮೇಲ್ಪಟ್ಟು ಇರಬಹುದು ಎಂದರೆ ಸರಿ.

ಪಾಟೀ ಸವಾಲುಃ - ಆರೋಪಿಗಳ ಪರ ಶ್ರೀ ಡಿ ಬಿ ಡಿ ವಕೀಲರಿಂದಃ

ನಾನು ಮಳಲಿ ವೃತ್ತದಲ್ಲಿ 2011 ರಿಂದ 2018 ರವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ. ನಂತರ ನಾನು ಹರಿಹರಪುರಕ್ಕೆ ಹೆಚ್ಚುವರಿ ಪ್ರಭಾರಿಯಾಗಿದ್ದೆ. ಹರಿಹರಪುರ ವೃತ್ತಕ್ಕೆ ಹರಿಹರ ಪುರ, ಸಿಗರನಹಳ್ಳಿ, ಬೋರನಹಳ್ಳಿ ತವನಂದಿ, ಬೀರನಹಳ್ಳಿ, ಅರೆಕಲ್ಲ ಹೊಸಳ್ಳಿ ಮತ್ತು ಚಾಕೇನಹಳ್ಳಿ ಸೇರಿರುತ್ತವೆ. ಮಳಲಿ ವೃತ್ತಕ್ಕೆ ಮಳಲಿ, ಪರಸನಹಳ್ಳಿ, ತೆರಣ್ಯ, ಅಂಕನಹಳ್ಳಿ, ಕರಗನಹಳ್ಳಿ, ಗವಿ ಸೋಮನಹಳ್ಳಿ, ಚಂದಾಪುರ ಸೇರಿರುತ್ತವೆ. ಸಿಗರನಹಳ್ಳಿ ಹರಿಹರಪುರ ವೃತ್ತಕ್ಕೆ ಸೇರಿರುತ್ತದೆ. ನಾನು ಅಲ್ಲಿ ಕರ್ತವ್ಯ ನಿರ್ವಹಿಸಿರುವುದರಿಂದ ಅಲ್ಲಿ ಗ್ರಾಮಸ್ಥರ ಪರಿಚಯ ಇದೆ ಎಂದರೆ ಸರಿ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ದಿನದ ಹಿಂದೆ ಸಿಗರನಹಳ್ಳಿ ಗ್ರಾಮದಲ್ಲಿ ಕ್ರಿಮಿನಲ್ ಮೊಕದ್ದಮೆಗಳು ದಾಖಲಾಗಿರುವ ಬಗ್ಗೆ ನನಗೆ ಗೊತ್ತಿಲ್ಲ. ದಿನಾಂಕ 02.04.2016 ಹಿಂದೆ ಸಿಗರನಹಳ್ಳಿ ಗ್ರಾಮದಲ್ಲಿ ಬಸವೇಶ್ವರ ದೇವಸ್ಥಾನ ಕೆ ಸಂಬಂಧಿಸಿದಂತೆ ಯಾವುದೇ ಗಲಾಟೆ ನಡೆದಿಲ್ಲ.

2. ಸಿಗರನಹಳ್ಳಿ ಗ್ರಾಮದಲ್ಲಿ ಅಂದಾಜು 600 ಜನಸಂಖ್ಯೆ ಇರಬಹುದು. ಜಾತ್ರೆ ಹರಿಹರಪುರದಲ್ಲಿ ನಡೆಯುತ್ತದೆ. ಹರಿಹರಪುರದಲ್ಲಿ ಹಿಂದಿನಿಂದಲೂ ಪ್ರತಿವರ್ಷ ಜಾತ್ರೆ ನಡೆಯುತ್ತಿತ್ತು ಎಂಬ ಅಂಶ ನನಗೆ ತಿಳಿದಿತ್ತು. ನಾವು ದಿನಾಂಕ 01.04.2016 ರಂದು ಸ್ಥಳಕ್ಕೆ ಬೆಳಿಗ್ಗೆ 10.00 ಗಂಟೆಗೆ ಹೋಗಿರುತ್ತೇವೆ. ನನ್ನೊಂದಿಗೆ ಚಾ ಸಾ 1,3, ಮತ್ತು 5 ಬಂದಿದ್ದರು. ಚಾ ಸಾ 1 ರವರು ಸ್ಥಳಕ್ಕೆ ಬಂದಾಗ 10.30 ಗಂಟೆಯಾಗಿತ್ತು. ನಾವು ಸ್ಥಳಕ್ಕೆ ಹೋದಾಗ ಪೊಲೀಸ್ ಸಿಬ್ಬಂದಿ ಅಲ್ಲಿ ಇರಲಿಲ್ಲ. ಸದರಿ ಗ್ರಾಮದಲ್ಲಿ ಮೊದಲು ಗಲಾಟೆ ಆಗಿದ್ದ ಬಗ್ಗೆ ಚಾಸಾ 3 ರವರು ತಿಳಿಸಿದ್ದರು. ಪೊಲೀಸ್ ರಕ್ಷಣೆಗಾಗಿ ನಾವು ಪೊಲೀಸರಿಗೆ ತಿಳಿಸಿದ್ದೇವು. ಮದ್ಯಾಹ್ನ 1.30 ಸುಮಾರಿಗೆ ಅಲ್ಲಿ 60-70 ಜನ ಅಲ್ಲಿ ಸೇರಿದ್ದರು. ನಾವು ದೇವಸ್ಥಾನ ದ ಹೊರಗಡೆ ಇದ್ದೇವು. ನಮ್ಮನ್ನು ಹೊರತುಪಡಿಸಿ ಬೇರೆ ಗ್ರಾಮಸ್ಥರು ಸ್ಥಳಕ್ಕೆ ಬಂದಿದ್ದನ್ನು ನಾನು ಗಮನಿಸಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ನಾನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಕರ್ತವ್ಯ ನಿರ್ವಹಿಸುವಾಗ ಮೊದಲು ನೋಡಿದ್ದೆ. ನಾನು ಗ್ರಾಮ ಲೆಕ್ಕಾಧಿಕಾರಿಯಾದ್ದರಿಂದ ಗ್ರಾಮದ ಮುಖ್ಯಸ್ಥರ ಹೆಸರುಗಳನ್ನು ಆರೋಪಿಗಳಂತೆ ಹೆಸರಿಸುತ್ತಿದ್ದು ಅವರು ಯಾರು ಸಹ ಗಲಾಟೆ ನಡೆದ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

3. ದೇವಸ್ಥಾನ ಬಾಗಿಲು ಎಷ್ಟು ದಿನದಿಂದ ಮುಚ್ಚಿತ್ತು ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ದೇವಸ್ಥಾನಕ್ಕೆ ಸುಣ್ಣ ಬಣ್ಣ ಬಳೆದಿತ್ತು ಆದರೆ ಅದನ್ನು ಮಾಡಿದ್ದರು ಅದು ನನಗೆ ಗೊತ್ತಿಲ್ಲ.

4. ಆರೋಪಿಗಳು ನಮ್ಮ ಕರ್ತವ್ಯಕ್ಕೆ ಅಡ್ಡಿ ಪಡಿಸಿಲ್ಲ, ನಮ್ಮನ್ನು ಅವ್ಯಾಚ್ಚ ಶಬ್ದದಿಂದ ನಿಂದಿಸಿಲ್ಲ, ನಾನು ಪಾಠ ಶಾಲೆಯಲ್ಲಿ ಇರಲಿಲ್ಲ. ನಾನು ಮೇಲಾಧಿಕಾರಿಗಳ ಮಾತು ಕೇಳಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತಿತದ್ದೇನೆ ಎಂದರೆ ಸರಿಯಲ್ಲ. ಐ ಪ್ಯಾಡ್ ಯಾವ ಕಂಪೆನಿಯದ್ದು ನನಗೆ ಗೊತ್ತಿಲ್ಲ. ಆರೋಪಿಗಳು ಕಲ್ಲು ಹಿಡಿದಿರಲಿಲ್ಲ, ಐ ಪ್ಯಾಡನ್ನು ತುಳಿದು ಜಖಂ ಗೊಳಿಸಿಲ್ಲ, ಪೊಲೀಸರು ಸ್ಥಳದಲ್ಲಿ ಇರದ ಕಾರಣ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣದ ನಂತರ ನಾನು ಪೊಲೀಸ್ ಠಾಣೆಗೆ ಹೋಗಿಲ್ಲ. ಸ್ಥಳದಲ್ಲಿ ಪೊಲೀಸರು ಮಹಜರ್ ಮಾಡಿರುತ್ತಾರೆ. ನಾನು ಹಾಜರಿರುತ್ತೇನೆ ಆದರೆ ಸಹಿ ಮಾಡಿರುವುದಿಲ್ಲ. ನಾನು ಠಾಣೆಗೆ ಹೋಗಿ ನನ್ನ ಹೇಳಿಕೆ ನೀಡಿಲ್ಲ. ಘಟನೆ ದಿನಾ ಇನ್ನು ಎಷ್ಟು ಪ್ರಕರಣಗಳು ಆ ಸ್ಥಳದಲ್ಲಿ ದಾಖಲಾಗಿವೆ ನನಗೆ ಗೊತ್ತಿಲ್ಲ. ಆರೋಪಿಗಳು ಯಾವುದೇ ಅಪರಾದ ಮಾಡಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲು ಮುಕ್ತಾಯ:

ಮರು ವಿಚಾರಣೆ ಇಲ್ಲ:

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇ.**

1ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ,

ಹೊಳೆನರಸೀಪುರ